# ನಿಮ್ಮೊಡನೆ

## ಪರೀಕ್ಷೆ: ಫೇಲಾಗುವುದು ಮಕ್ಕಳಲ್ಲ, ಶಿಕ್ಷಣ ವ್ಯವಸ್ಥೆ...

**ವಿದ್ಯಾರ್ಥಿಗಳ ಪಾಲಿಗೆ ರಚನಾತ್ಮಕವಾಗಬೇಕಾದ ಕಲಿಕೆ ಮತ್ತು ಪರೀಕ್ಷೆ ಸ್ಪರ್ಧಾತ್ಮಕವಾಗಿವೆ. ತರಗತಿಗಳು, ಟ್ಯೂಷನ್ ಕೇಂದ್ರಗಳು, ಪರೀಕ್ಷೆಗಳು ರಣರಂಗಗಳಾಗಿ ಮಕ್ಕಳು ಸಿಪಾಯಿಗಳ ಪಾತ್ರ ವಹಿಸಬೇಕಾಗಿದೆ. ಇದರ ಘೋರ ಪರಿಣಾಮ ಪರೀಕ್ಷೆ– ಫಲಿತಾಂಶದ ಜೊತೆಗೆ ಒಟ್ಟಾರೆ ಸಾಮಾಜಿಕ ವ್ಯವಸ್ಥೆಯ ಮೇಲೂ ಆಗುತ್ತಿದೆ.**

ಪಿಯುಸಿ ಎರಡನೇ ವರ್ಷದ ಫಲಿತಾಂಶ ಪ್ರಕಟಗೊಂಡ ಆಸುಪಾಸಿನಲ್ಲಿ ರಾಜ್ಯದ ವಿವಿಧ ಭಾಗಗಳಿಂದ ವರದಿಯಾಗಿರುವ ಕೆಲವು ಘಟನೆಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಟೊಳ್ಳನ್ನು ಸೂಚಿಸುವಂತಿವೆ. ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿನ ಮಕ್ಕಳ ಯಶೋಗಾಥೆಗಳು ಮಾಧ್ಯಮಗಳಲ್ಲಿ ಪ್ರಕಟಗೊಳ್ಳುವುದು ವಾರ್ಷಿಕ ಸಂಪ್ರದಾಯದಂತಾಗಿದೆ. ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳ– ಅದರಲ್ಲೂ ಪ್ರತಿಕೂಲ ಪರಿಸ್ಥಿತಿಯಲ್ಲೂ ಅತ್ಯುತ್ತಮ ಫಲಿತಾಂಶ ಪಡೆದಿರುವ ಮಕ್ಕಳ– ಸಾಧನೆಯನ್ನು ಕೊಂಡಾಡುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಈ ಸಾಧಕರ ಕಥನಗಳ ಪ್ರಭಾವಳಿಯ ನಡುವೆ, ಕೆಲವು ಮಕ್ಕಳು ತಮ್ಮ ಬದುಕನ್ನು ಕೊನೆಗೊಳಿಸಿಕೊಂಡಿರುವ ಪುಟ್ಟ ಪುಟ್ಟ ವರದಿಗಳನ್ನೂ ಗಮನಿಸಬೇಕು.


ಪಿಯುಸಿ ಫಲಿತಾಂಶ ಪ್ರಕಟಗೊಂಡ ನಂತರ ಅನುತ್ತೀರ್ಣರಾದ ಐವರು ವಿದ್ಯಾರ್ಥಿಗಳು ಜೀವ ಕಳೆದುಕೊಂಡಿದ್ದಾರೆ. ಫಲಿತಾಂಶ ಪ್ರಕಟಗೊಳ್ಳುವ ಕೆಲವು ತಾಸುಗಳ ಮೊದಲಷ್ಟೇ ಫೇಲಾಗುವ ಭಯದಿಂದ ಟೆರೇಸ್‌ನಿಂದ ಜಿಗಿದು ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಪ್ರತಿ ವರ್ಷ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಫಲಿತಾಂಶ ಪ್ರಕಟವಾದ ಸಂದರ್ಭದಲ್ಲಿ ಇಂಥ ಅನಾಹುತಗಳು ನಡೆಯುವುದು ಮಾಮೂಲು ಎನ್ನುವಂತಾಗಿದೆ.

ಶಿಕ್ಷಣದ ಮೂಲಭೂತ ಉದ್ದೇಶವೇ ಮಕ್ಕಳನ್ನು ಮಾನಸಿಕ ಸಬಲಗೊಳಿಸುವುದು. ಮನೋವಿಕಾಸದೊಂದಿಗೆ ಸದೃಢ ವ್ಯಕ್ತಿತ್ವ ರೂಪಿಸುವಿಕೆ ಶಿಕ್ಷಣದಿಂದ ಸಾಧ್ಯವಾಗಬೇಕು. ಬದುಕಿನ ದುರ್ಬರ ಗಳಿಗೆಗಳನ್ನು ಎದುರಿಸಲು ಅಗತ್ಯವಾದ ಮನೋಬಲ ಶಾಲಾ ಕಾಲೇಜುಗಳ ಮೂಲಕ ವಿದ್ಯಾರ್ಥಿಗಳಿಗೆ ದೊರೆಯಬೇಕು. ದುರದೃಷ್ಟವಶಾತ್, ಸದ್ಯದ ಶಿಕ್ಷಣ ವ್ಯವಸ್ಥೆ ಮಕ್ಕಳನ್ನು ಮಾನಸಿಕವಾಗಿ ಕುಗ್ಗಿಸುತ್ತಿದೆ. ಸ್ಪರ್ಧೆಯ ಹೆಸರಿನಲ್ಲಿ ವಿದ್ಯಾರ್ಥಿಗಳನ್ನು ಓಟದ ಕುದುರೆಗಳಂತೆ ನೋಡಲಾಗುತ್ತಿದೆ. ಇದರ ಪರಿಣಾಮವಾಗಿಯೇ, ಪರೀಕ್ಷೆ ಹಾಗೂ ಫಲಿತಾಂಶವನ್ನು ಸಕಾರಾತ್ಮಕಾಗಿ ನೋಡುವುದು ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ. ಪರೀಕ್ಷೆಯಲ್ಲಿನ ಹಿನ್ನಡೆಯನ್ನು ಬದುಕಿನ ಸೋಲೆಂದೇ ಭಾವಿಸುವ ಮನಸ್ಥಿತಿ ಸ್ವಯಂಘಾತುಕವಾದುದು. ಈಗಂತೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಹೆಚ್ಚುವರಿ ಅವಕಾಶಗಳಿವೆ. ಮೊದಲ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೂ, ಮತ್ತೊಂದು ಅವಕಾಶದಲ್ಲಿ ಯಶಸ್ಸು ಪಡೆಯಲು ಸಾಧ್ಯವಿದೆ. ಶೈಕ್ಷಣಿಕ ವರ್ಷವೊಂದು ನಷ್ಟಗೊಳ್ಳುವ ಭೀತಿಯಿಲ್ಲದೆ ವಿದ್ಯಾರ್ಥಿಗಳು ಫಲಿತಾಂಶವನ್ನು ಸರಿಪಡಿಸಿಕೊಳ್ಳಬಹುದಾಗಿದೆ. ಇಷ್ಟು ಅವಕಾಶವಿದ್ದರೂ ಕೆಲವು ಮಕ್ಕಳು ತಮ್ಮ ಬದುಕನ್ನು ಕೊನೆಗಾಣಿಸಿಕೊಳ್ಳುತ್ತಿರುವುದು ಶಿಕ್ಷಣ ಹಾಗೂ ಪರೀಕ್ಷಾ ವ್ಯವಸ್ಥೆ ಸಂವೇದನೆಯ ಕೊರತೆಯಿಂದ ಬಳಲುತ್ತಿರುವುದರ ಸೂಚನೆಯಂತಿದೆ.

ಮಕ್ಕಳು ಅಧೀರರಾಗುವಲ್ಲಿ ಪೋಷಕರ ಪಾತ್ರವೂ ಇದೆ. ಇದಕ್ಕೆ ನಿದರ್ಶನದ ರೂಪದಲ್ಲಿ, ಈ ವರ್ಷದ ಪಿಯುಸಿ ಫಲಿತಾಂಶ ಪ್ರಕಟಗೊಂಡ ಸಂದರ್ಭದಲ್ಲೇ, ತಾಯಿಯೊಬ್ಬಳಿಗೆ ಶಿಕ್ಷೆಯಾಗಿರುವ ಪ್ರಕರಣವನ್ನು ಗಮನಿಸಬಹುದು. ಕಳೆದ ವರ್ಷ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣಳಾದ ಮಗಳನ್ನು ತಾಯಿಯೇ ಇರಿದು ಕೊಂದ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯ ಕಳೆದ ವಾರ ಅಪರಾಧಿಗೆ ಜೀವಾವಧಿ ಜೈಲು ಶಿಕ್ಷೆ ವಿಧಿಸಿದೆ. ಉತ್ತಮ ಫಲಿತಾಂಶದೊಂದಿಗೆ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವೆ ಎಂದು ಹೇಳಿದ್ದ ಮಗಳು, ನಾಲ್ಕು ವಿಷಯಗಳಲ್ಲಿ ಅನುತ್ತೀರ್ಣಳಾದುದರಿಂದ ಹತಾಶಳಾಗಿದ್ದ ತಾಯಿ, ಒಡಲಕುಡಿಯನ್ನು ಕೊಂದು ತಾನೂ ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು. ಮಗಳನ್ನು ಕೊಂದದ್ದು ಅಪರಾಧವಾದರೂ, ಆ ತಾಯಿಯನ್ನು ನಾವು ಸಹಾನುಭೂತಿಯಿಂದಲೇ ನೋಡಬೇಕಾಗಿದೆ. ಅನುತ್ತೀರ್ಣರಾದ ವಿದ್ಯಾರ್ಥಿಗಳ ಬಗೆಗಿನ ಸಮಾಜದ ಕಡೆಗಣ್ಣಿನ ಧೋರಣೆ ಮಕ್ಕಳ ಜೊತೆಗೆ ಪೋಷಕರನ್ನೂ ಗಾಸಿಗೊಳಿಸುವಂತಹದ್ದು. ಮಕ್ಕಳು ಅನುತ್ತೀರ್ಣರಾದಾಗ ಎಲ್ಲ ಪೋಷಕರೂ ತಾಳ್ಮೆಗೆಟ್ಟು ಇಲ್ಲವೇ ಹತಾಶರಾಗಿ ಮಕ್ಕಳನ್ನು ಶಿಕ್ಷೆಗೊಳಪಡಿಸುವುದಿಲ್ಲ. ಆದರೆ, ಮಕ್ಕಳು ಫೇಲಾಗುವ ಅಥವಾ ಕಡಿಮೆ ಅಂಕಗಳನ್ನು ಪಡೆದ ಸಂದರ್ಭದಲ್ಲಿ ಬಹಳಷ್ಟು ಪೋಷಕರು ಅಸಹನೆಯಿಂದ ವರ್ತಿಸುತ್ತಾರೆ. ಪರೀಕ್ಷೆಗಳಲ್ಲಿನ ಅಂಕಗಳ ಹೊರತಾಗಿ ಮಕ್ಕಳ ಭವಿಷ್ಯವನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದ ಮಟ್ಟಿಗೆ ಪೋಷಕರ ಮನಸ್ಥಿತಿಯನ್ನು ನಮ್ಮ ಶಿಕ್ಷಣ ವ್ಯವಸ್ಥೆ ಪ್ರಭಾವಿಸಿದೆ.

ಮಕ್ಕಳ ಮೇಲೆ ಅನಗತ್ಯ ಒತ್ತಡವನ್ನು ಹೇರುವುದರಲ್ಲಿ ಟ್ಯೂಷನ್ ಕೇಂದ್ರಗಳ ಪಾತ್ರವೂ ಇದೆ. ಇತ್ತೀಚಿನ ವರ್ಷಗಳಲ್ಲಂತೂ ಬಹುತೇಕ ಶಾಲಾ ಕಾಲೇಜುಗಳು ಟ್ಯೂಷನ್ ಕೇಂದ್ರಗಳಾಗಿಯೇ ತಮ್ಮನ್ನು ರೂಪಿಸಿಕೊಂಡಿವೆ. ಈ ಕೇಂದ್ರಗಳು ಎಳೆಯ ಮಕ್ಕಳನ್ನು ಕಬ್ಬಿನಂತೆ ಅರೆಯುತ್ತವೆ. ವಿದ್ಯಾರ್ಥಿಗಳ ಪಾಲಿಗೆ ರಚನಾತ್ಮಕವಾಗಬೇಕಾದ ಕಲಿಕೆ ಮತ್ತು ಪರೀಕ್ಷೆ ಸ್ಪರ್ಧಾತ್ಮಕವಾಗಿ ಪರಿಣಮಿಸಿವೆ. ತರಗತಿಗಳು, ಟ್ಯೂಷನ್ ಕೇಂದ್ರಗಳು, ಪರೀಕ್ಷೆಗಳು ರಣರಂಗಗಳಾಗಿ ಪರಿವರ್ತನೆಗೊಂಡು ಮಕ್ಕಳು ಸಿಪಾಯಿಗಳ ಪಾತ್ರ ವಹಿಸಬೇಕಾಗುತ್ತದೆ. ಇದರ ಘೋರ ಪರಿಣಾಮ ಪರೀಕ್ಷೆ– ಫಲಿತಾಂಶದಲ್ಲಿ ಮಾತ್ರವಲ್ಲದೆ, ಒಟ್ಟಾರೆ ಸಾಮಾಜಿಕ ವ್ಯವಸ್ಥೆಯ ಮೇಲೂ ಉಂಟಾಗುತ್ತದೆ. ಉದ್ಯೋಗದ ನಂತರವೂ ಒತ್ತಡದ ವರ್ತುಲದಿಂದ ಹೊರಬರಲು ಯುವ ತಲೆಮಾರಿಗೆ ಸಾಧ್ಯವಾಗದಿರುವುದಕ್ಕೂ ಹಾಗೂ ಬದುಕಿನ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಹೊಂದಲು ಸಾಧ್ಯವಾಗದಿರುವುದಕ್ಕೂ ಶಿಕ್ಷಣ ವ್ಯವಸ್ಥೆ ಮಾನವೀಯ ಸ್ಪಂದನಗಳಿಂದ ಅಂತರ ಕಾಪಾಡಿಕೊಂಡಿರುವುದಕ್ಕೂ ಸಂಬಂಧವಿದೆ.

■ **ರಘುನಾಥ ಚ.ಹ.**



ಈಶ್ವರ್